# ವಿನೋದದ ವಿಕ್ಟರಿ



'ರ್‍ಯಾಂಬೊ' ಯಶಸ್ಸಿನ ನಂತರ ಶರಣ್ ನಾಯಕರಾಗಿ ನಟಿಸಿದ 'ವಿಕ್ಟರಿ' ಚಿತ್ರ ಗೆಲುವಿನ ಹಾದಿಯಲ್ಲಿದೆ. ಆ ಮೂಲಕ ಶರಣ್‌ರ ನಾಯಕಪಟ್ಟ ಇನ್ನಷ್ಟು ಗಟ್ಟಿಯಾಗಿದೆ. ಎಂದಿನಂತೆ 'ಈ ಗೆಲುವು ನಮ್ಮ ತಂಡಕ್ಕೆ ಸಲ್ಲಬೇಕು' ಎಂದು ಶರಣ್ ವಿನಯದಿಂದ ಹೇಳಿದ್ದಾರೆ. ಸಿನಿಮಾಕ್ಕೆ ಸಂದ ವಿಕ್ಟರಿ ನಾಯಕನ ತಲೆಗೆ ಏರದಿರುವುದು ವಿಶೇಷ.

ಶರಣ್ ಸಿನಿಮಾಗಳ ಗೆಲುವು ಆಕಸ್ಮಿಕವೂ ಅಲ್ಲ, ಅದೃಷ್ಟವೂ ಅಲ್ಲ. ಆ ಚಿತ್ರಗಳ ಹಿಂದೆ ಶರಣ್ ನೇತೃತ್ವದ ತಂಡವೊಂದರ ಶ್ರದ್ಧೆ ಹಾಗೂ ಪಕ್ಕಾ ಲೆಕ್ಕಾಚಾರ ಎದ್ದುಕಾಣುತ್ತದೆ. ನಾಯಕನಷ್ಟೇ ಸಿನಿಮಾದ ಇತರ ಅಂಶಗಳಿಗೂ ಆ ಚಿತ್ರಗಳಲ್ಲಿ ಪ್ರಾಧಾನ್ಯತೆಯಿದೆ. 'ರ್‍ಯಾಂಬೊ' ಚಿತ್ರದಲ್ಲಿ ಕಥೆಯನ್ನು ನೆಚ್ಚಿಕೊಂಡಿದ್ದ ಶರಣ್, ತಮ್ಮ ಪಾತ್ರದಷ್ಟೇ ತಬಲಾ ನಾಣಿ ಅವರ ಪಾತ್ರಕ್ಕೂ ಅವಕಾಶ ನೀಡಿದ್ದರು. ಕಥೆಯ ಕಾಳಜಿ 'ವಿಕ್ಟರಿ'ಯಲ್ಲೂ ಮುಂದುವರಿದಿದೆ. ಹಾಡುಗಳಿಗೆ ಕೂಡ ಶರಣ್ ಚಿತ್ರಗಳಲ್ಲಿ ವಿಶೇಷ ಆಸ್ಥೆಯಿದೆ. 'ವಿಕ್ಟರಿ' ಚಿತ್ರದ 'ಖಾಲಿ ಕ್ವಾಟ್ರು ಬಾಟ್ಲು' 2013ರ ಜನಪ್ರಿಯ ಗೀತೆಗಳಲ್ಲೊಂದಾಗಿ ಗುರ್ತಿಸಿಕೊಂಡಿದೆ. ಹೀಗೆ, ಸಿನಿಮಾ ಮಸಾಲೆಯ ಹದಮಿಳಿತವೇ ಶರಣ್ ಚಿತ್ರಗಳ ಗೆಲುವಿನ ಗುಟ್ಟಾಗಿದೆ.

ಪ್ರಸ್ತುತ ಕನ್ನಡ ಚಿತ್ರರಂಗಕ್ಕೆ ಬೇಕಾಗಿರುವುದು ಮಧ್ಯಮ ಬಜೆಟ್‌ನ, ಅಚ್ಚುಕಟ್ಟು ನಿರ್ಮಾಣದ ರಂಜನೀಯ ಚಿತ್ರಗಳು. ಇಂಥ ಚಿತ್ರಗಳನ್ನು ರೂಪಿಸುವ ಕಸುಬುದಾರಿಕೆ ಶರಣ್ ಮತ್ತವರ ತಂಡಕ್ಕೆ ಸಿದ್ಧಿಸಿದಂತಿದೆ. ಶರಣ್‌ರ ಮುಂದಿನ ಚಿತ್ರ 'ಜಯಲಲಿತಾ' ಕೂಡ ಕುತೂಹಲ ಕೆರಳಿಸಿದೆ. ಚಿತ್ರದುದ್ದಕ್ಕೂ ಅವರು ಮಹಿಳೆಯ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದು, ಈ ಪಾತ್ರವೇ ನಾಯಕ, ನಾಯಕಿ ಎರಡೂ ಆಗಿರುವುದು ವಿಶೇಷ. 'ಜಯಲಲಿತಾ' ಚಿತ್ರದ ಶೀರ್ಷಿಕೆ ಹಾಗೂ ಪೋಸ್ಟರ್‌ಗಳು ಚಿತ್ರರಸಿಕರ ಕುತೂಹಲ ಕೆರಳಿಸಿವೆ.

■ ರಘು

